


# ಮಾನವನ ಪತನ

ಬಹಳ ದೀರ್ಘಕಾಲದಿಂದ ಮನುಷ್ಯನು ಅನಂತ ಆಗಸದತ್ತ ನೋಟ ಬೀರಿ, ಶಾಂತ ನೀಲಿ ಅನಂತ ಬದುಕನ್ನು ನಿರೀಕ್ಷಿಸುತ್ತಿದ್ದಾನೆ. ಕಲ್ಪನೆಯಿರಬಹುದು, ಉತ್ತಮ ನಾಳಿನ ಕನಸಿರಬಹುದು; ಅವನ ನಿರೀಕ್ಷೆ ಮಾತ್ರ ಹುಸಿಯಲ್ಲ. ಪ್ರಪಂಚದಲ್ಲಿ ಅದೆಷ್ಟು ಮಹಾಯುದ್ಧಗಳಾದವು! ಯಾವುದೋ ಹುಸಿ ಆದರ್ಶಗಳ ಬೆನ್ನುಹತ್ತಿ ಎಂತೆಂತಹ ನರಮೇಧಗಳಾದವು! ಅನ್ಯಾಯ, ಅನಾಚಾರ, ದೌರ್ಜನ್ಯಗಳಿಂದ ಎಲ್ಲರೂ ನರಳಬೇಕಾಗುತ್ತದೆ, ಎಲ್ಲರಿಗೂ ಗಂಡಾಂತರ, ಸಂಕಟ ತಪ್ಪಿದ್ದಲ್ಲ ಎಂಬುದನ್ನು ಜಗತ್ತು ಅದೆಷ್ಟು ಬಾರಿ ತಿಳಿಸಿಕೊಡಬೇಕು? ಆದರೂ ಮತ್ತೊಮ್ಮೆ ಮಹಾಯುದ್ಧದ ಕಾರ್ಮೋಡ ಜಗತ್ತನ್ನು ಕವಿದಂತಿದೆ. ಜನಾಂಗೀಯ ಕಲಹ, ಮತಾಂಧತೆ, ಆರ್ಥಿಕ ಪೈಪೋಟಿ,ಇದರೊಂದಿಗೆ ಭೂವ್ಯಾಮೋಹದ ಮಹತ್ವಾಕಾಂಕ್ಷೆ – ಇವೆಲ್ಲ ಮತ್ತೊಮ್ಮೆ ದೇಶ–ದೇಶಗಳ ನಡುವಿನ ಕಲಹಕ್ಕೆ ಕಾರಣವಾಗಿದೆ. ಹಿಂದಿನ ಯುದ್ಧಗಳಿಗೆ ಹೋಲಿಸಿದರೆ, ಈ ಬಾರಿ ಮಹಾಯುದ್ಧ ನಡೆದರೆ ಅದರ ಪರಿಣಾಮವನ್ನು ಊಹಿಸುವುದೂ ಕಷ್ಟವಾದೀತು. ಆದರೂ ಮಾನವನಿಗೆ ಶಾಂತಿ, ಸಹಬಾಳ್ವೆ, ಸಾಮರಸ್ಯಕ್ಕಿಂತ ತನ್ನ ಛಲವನ್ನು ಸಾಧಿಸುವ ಹಠಮಾರಿತನವೇ ಮುಖ್ಯವಾದಂತೆ ಅನ್ನಿಸುತ್ತದೆ. ಇಲ್ಲಿಯ ತನಕ ಹೇಳಿಕೊಂಡುಬಂದ ಶಾಂತಿಯ ಪಾತಗಳೆಲ್ಲವೂ ಎಲ್ಲೋ ದೂರ ಹಾರಿಹೋದಂತಿದೆ.

ಒಂದರ್ಥದಲ್ಲಿ ಅರಾಜಕತೆಯ ನಡುವೆಯೇ ಶಾಂತಿ, ನೆಮ್ಮದಿ, ಸತ್ಯಗಳ ಬಯಕೆ ಉದಿಸುತ್ತದೆ. ಇದಕ್ಕೆ ಒಂದು ಉದಾಹರಣೆ ಭಗವದ್ಗೀತೆ. ಮಹಾಭಾರತದಂತಹ ಯುದ್ಧ, ಗೊಂದಲ, ಬಿಕ್ಕಟ್ಟು ಹಿಂದೆಂದೂ ನಡೆದಿರಲಿಲ್ಲ. ಅದರ ಹಿನ್ನೆಲೆಯಲ್ಲೇ ಶ್ರೀಕೃಷ್ಣನಿಂದ ಹರಿದು ಬಂದ ಗೀತೆಯ ಸಂದೇಶ ಅದೆಷ್ಟು ಉದಾತ್ತವಾಗಿದೆ! ಇದೇ ರೀತಿ ಎರಡು ಜಾಗತಿಕ ಮಹಾಯುದ್ಧಗಳಾದ ಮೇಲೆ ಮಾನವನ ಸಂತತಿಗೆ ಶಾಂತಿ, ಸಾಮರಸ್ಯಗಳ ಬಯಕೆ ಅದೆಷ್ಟು ಉತ್ಕಟವಾಗಿ ಉಕ್ಕಿಬಂದವು! ಜಪಾನಿನಂತಹ ದೇಶ ಸಂಪೂರ್ಣವಾಗಿ ಯುದ್ಧಕ್ಕೆ ವಿರುದ್ಧವಾಗಿ ನಿರ್ಣಯ ತೆಗೆದುಕೊಂಡಿತು. ಎಂಬತ್ತು ವರ್ಷಗಳಿಗೂ ಹೆಚ್ಚು ಕಾಲ ಮತ್ತೊಂದು ಮಹಾಯುದ್ಧ ನಡೆಯದಂತೆ, ಜಗತ್ತು ಹಾಗೂ ಹೀಗೂ ಮುಂದುವರಿದುಕೊಂಡು ಬಂತು. ಆದರೆ ಇತ್ತೀಚಿನ ಜಾಗತಿಕ ಬೆಳವಣಿಗೆಗಳು ಇದನ್ನು ಬುಡಮೇಲು ಮಾಡುವಂತಿದೆ. ರಷ್ಯಾ–ಉಕ್ರೇನ್ ಯುದ್ಧ, ಇಸ್ರೇಲ್–ಹಮಾಸ್ ನಡುವಿನ ಯುದ್ಧ, ಇತ್ತ ತೈವಾನ್ ಮೇಲೆ ಆಧಿಪತ್ಯ ಸ್ಥಾಪಿಸಲು ಹಣಿಯುತ್ತಿರುವ ಚೀನಾ – ಇವೆಲ್ಲ ಮೂರನೇ ಮಹಾಯುದ್ಧ ನಡೆಯುವುದೇ ಎಂಬ ಆತಂಕಕ್ಕೆ ಕಾರಣವಾಗಿವೆ. ಯಾವ ಸಂಧಾನ ಪ್ರಯತ್ನಗಳೂ ಫಲದಾಯಕವಾಗುತ್ತಿಲ್ಲ. ಅಣ್ವಸ್ತ್ರಗಳ ಮಾರಕ ಬಳಕೆ ಎಂತಹ ವಿಪತ್ತಿಗೆ ಜಗತ್ತನ್ನು ತಳ್ಳಬಲ್ಲದು ಎಂಬುದನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಕೋವಿಡ್ ಮಹಾಮಾರಿಯ ನಂತರ ಜಗತ್ತಿನ ಎಲ್ಲ ದೇಶಗಳಲ್ಲೂ ಆರ್ಥಿಕ ಹಿನ್ನಡೆ ಉಂಟಾಗಿದೆ; ಶ್ರೀಲಂಕಾ, ಪಾಕಿಸ್ತಾನದಂತಹ ದೇಶಗಳು ದಿವಾಳಿಯ ಅಂಚಿನಲ್ಲಿವೆ. ಆದರೂ ಕೋಟ್ಯಂತರ ದುಡ್ಡು ಸುರಿದು ಭಯೋತ್ಪಾದನೆ, ದಂಗೆ, ಯುದ್ಧ ಭೀತಿಗಳನ್ನು ಸೃಷ್ಟಿಸುವುದು ನಿರಂತರ ಮುಂದುವರಿದಿದೆ. ಇವುಗಳ ನಡುವೆ ಮೂಡಿ ಬರುವ, ಉತ್ತರ ಕಾಣದ ಪ್ರಶ್ನೆಯಿದು: ‘ಮಾನವನು ಹಳೆಯ ಗಾಯಗಳಿಂದ ಪಾಠ ಕಲಿಯುತ್ತಿಲ್ಲ ಏಕೆ?’

### ಮಾನವನ ಪತನ – ಕಾರಣಗಳು

ಪ್ರಾಚೀನ ಗ್ರೀಕ್ ನಾಟಕಗಳು ದುರಂತವನ್ನೇ ವೈಭವೀಕರಿಸಿ, ಮರುಕದ ಹಾಗೂ ಭಯಾನಕ ಸನ್ನಿವೇಶದ ಚಿತ್ರಣವನ್ನು ನೀಡುತ್ತವೆ. ಇಡೀ ಮನುಕುಲದ ಇತಿಹಾಸವನ್ನು ಒಟ್ಟಾಗಿ ನೋಡುವಾಗ ಒಂದು ಸತ್ಯ ವಿಸ್ಮಯವನ್ನು ಹುಟ್ಟಿಸುತ್ತದೆ: ಮನುಷ್ಯ ಎಷ್ಟೇ ಸಂದರ್ಭಗಳಲ್ಲಿ ಗೆಲುವಿನ, ಹೊಸ ಅನ್ವೇಷಣೆಯ, ಹೊಸ ಹೊಸ ಸಾಧನೆಯ ಮೈಲಿಗಲ್ಲುಗಳನ್ನು ದಾಟಿ ಹೋದರೂ, ಮತ್ತೆ ಮತ್ತೆ ಅವನ ಗಮನ ಪತನದೆಡೆಗೆ. ಇದೇಕೆ ಹೀಗೆ? ಮರಣ, ವಿನಾಶ, ದಾರುಣ ಅಂತ್ಯ – ಇವುಗಳ ಕಡೆಗೇ ಸಾಗುವ ಅವನ ಗಮನ, ತಾನು ಬಲಿಬೀಳುವ ಭಯಾನಕತೆಯನ್ನು ಕಂಡುಕೊಳ್ಳುವುದೇ ಇಲ್ಲವೇ? ಸ್ವಲ್ಪವೇ ಸ್ವಲ್ಪ ಬುದ್ಧಿ, ವಿವೇಕ, ಅವಲೋಕನ – ಇವನ್ನು ಬಳಸಿದ್ದರೂ ಮನುಷ್ಯನು ಹಲವು ದುರಂತಗಳನ್ನು ತಪ್ಪಿಸಿಕೊಳ್ಳಬಹುದಾಗಿತ್ತು. ಇದು ಇತಿಹಾಸವನ್ನು ಓದುವಾಗ ನಮಗೆ ಪದೇ ಪದೇ ಅನ್ನಿಸುವ ಭಾವನೆ. ಇಂತಹ ಪತನಗಳಿಗೆ ಕಾರಣವೇನು? ಎಷ್ಟು ಬಾರಿ ಎದ್ದು ಮುಂದುವರಿದರೂ ಮತ್ತೆ ಮತ್ತೆ ಪತನದೆಡೆಗೆ ಸಾಗುವುದೇ ಮಾನವನ ಸ್ವಭಾವವೇ?

ಬೆಂಕಿ ಹುಳು ದೀಪದ ಬೆಳಕಿನ ಆಕರ್ಷಣೆಯಿಂದ ಹಾರಿ ಬರುತ್ತದೆ. ತನ್ನ ಕಣ್ಣೆದುರೇ ಹಲವು ಹುಳುಗಳು ಬೆಂಕಿಯಲ್ಲಿ

ಅರೆ ಬೆಂದು, ಹೊರಬಿದ್ದರೂ ಕೂಡ – ಅದು ಮತ್ತೆ ಬೆಳಕಿನ ಕಡೆಗೇ ಹಾರುತ್ತದೆ; ಮತ್ತೆ ಭಸ್ಮವಾಗುವವರೆಗೆ. ಮಾನವನ ಅವಸ್ಥೆಯೂ ಇದೇ ರೀತಿ ಇದೆಯೆ?

ಮಾನವನ ನಿಜವಾದ ಸ್ವಭಾವ ದೈವಿಕವಾದುದು ಎಂದು ವೇದಾಂತ ಹೇಳುತ್ತದೆ. ಸ್ವಾಮಿ ವಿವೇಕಾನಂದರು ಈ ದಿವ್ಯ ಸಂದೇಶವನ್ನೇ ಎತ್ತಿಹಿಡಿದರು. ಹಾಗಿದ್ದಲ್ಲಿ , ವಿನಾಶಕರವಾದ, ಸರ್ವಗ್ರಾಸಿಯಾದ ದುರಂತದೆಡೆಗೆ ಸಾಗುವ ಪ್ರವೃತ್ತಿ ಅವನಲ್ಲಿ ಏಕೆ ಇನ್ನೂ ಕಂಡುಬರುತ್ತದೆ? ದಿವ್ಯತೆಯೇ ಅವನ ನೈಜ ಸ್ವಭಾವವೆನ್ನುವ ಬದಲು ಮರಣೋನ್ಮುಖಿಯಾಗಿ ಸಾಗುವ ಪ್ರವೃತ್ತಿಯೇ ಅವನ ನಿಜವಾದ ಸ್ವಭಾವವೆನ್ನಬಹುದಲ್ಲ? ಈ ಪ್ರಶ್ನೆ ಇಲ್ಲಿ ಮೂಡುತ್ತದೆ. ವೇದಾಂತ ತತ್ತ್ವಗಳ ಹಿನ್ನೆಲೆಯಲ್ಲಿ, ಎಲ್ಲ ಅನರ್ಥಗಳಿಗೂ ಮೂಲ ಕಾರಣ ಅಜ್ಞಾನವೆಂದು ಉತ್ತರ ನೀಡಬಹುದು. ಆದರೆ ಪದೇ ಪದೇ ತಪ್ಪು ಮಾಡುವ, ಎಷ್ಟು ಬಾರಿ ಏಟು ತಿಂದರೂ ಬುದ್ಧಿ ಬಾರದ 'ದುರ್ಯೋಧನನ' ಪ್ರವೃತ್ತಿಯನ್ನು ಅಷ್ಟು ಸುಲಭವಾಗಿ ವಿವರಿಸಲಾಗುವುದಿಲ್ಲ. ಜನಾಂಗವಾದ, ಮತಾಂಧತೆ, ಸ್ವಾರ್ಥಪರವಾದ ರಾಜಕೀಯ, ಆರ್ಥಿಕ ದಬ್ಬಾಳಿಕೆ – ಇವುಗಳನ್ನು ಯಾವ ವಿವೇಕವೂ, ತರ್ಕವೂ ಬದಲಾಯಿಸದ ಪರಿಸ್ಥಿತಿ ಇಂದು ಜಗತ್ತಿನಲ್ಲಿದೆ. ಈ ಕಾರಣದಿಂದ ಎಲ್ಲ ಅನರ್ಥಗಳ ಮೂಲವನ್ನು ನಾವು ಬೇರೆ ರೀತಿ ಅರ್ಥೈಸಿಕೊಳ್ಳಬೇಕಾಗಿದೆ.

ಮಧ್ಯಪ್ರಾಚ್ಯ ದೇಶಗಳಲ್ಲಿ (ಗಲ್ಫ್‌ದೇಶಗಳು) ಉಂಟಾಗಿರುವ ಬಿಕ್ಕಟ್ಟನ್ನೇ ತೆಗೆದುಕೊಳ್ಳೋಣ. ಅಲ್ಲಿ ಆರ್ಥಿಕ ಪೈಪೋಟಿ, ಧಾರ್ಮಿಕ ಕಲಹ, ಜನಾಂಗ ಕಲಹ – ಎಲ್ಲವೂ ಕೆಲಸ ಮಾಡುತ್ತವೆ. ದೇಶ–ದೇಶಗಳ ನಡುವಿನ ಸಂಬಂಧಗಳು ಅಷ್ಟೇನೂ ಹಿತಕರವಾಗಿಲ್ಲ. ಅಲ್ಲಿನ ಭೌಗೋಳಿಕ ರಾಜಕೀಯವು ಸದಾ ಅಲ್ಲೋಲ ಕಲ್ಲೋಲಗೊಳ್ಳುತ್ತಿರುತ್ತವೆ. ಅಲ್ಲಿನ ಸಮಸ್ಯೆಗಳಿಗೆ ಮೂಲ ಕಾರಣಗಳನ್ನು ಕಂಡುಕೊಳ್ಳುವುದೂ ಅತ್ಯಂತ ಕ್ಲಿಷ್ಟಕರ. ಆದರೆ ಇಡೀ ಮಾನವ ಪ್ರವೃತ್ತಿಯ ದೃಷ್ಟಿಕೋನದಿಂದ ನೋಡಿದಾಗ, ಎಲ್ಲ ಒಳಿತಿನ ಮೂಲವಾದ ಪ್ರಾಮಾಣಿಕತೆ, ವಿಶ್ವಾಸ, ಪರಸ್ಪರ ಸೌಹಾರ್ದತೆ ಇವುಗಳ ಕೊರತೆಯೇ ಅಲ್ಲಿ ಎದ್ದುಕಾಣುತ್ತದೆ. ಇದು ಇಡೀ ಪ್ರಪಂಚದ ಸಮಸ್ಯೆಗಳಿಗೆ ಮೂಲಕಾರಣವೂ ಹೌದು. ಜಗತ್ತು ಇನ್ನೂ ವಿಶ್ವಾಸ, ನಂಬುಗೆಯ ಆಧಾರದಲ್ಲಿಯೇ ನಡೆಯುತ್ತಿದೆ. ಅದಕ್ಕೆ ವಿಘ್ನವುಂಟಾದಾಗ ವಿನಾಶ, ಬಿಕ್ಕಟ್ಟು ಅನಿವಾರ್ಯ.

### ಶಾಂತಿ, ಸತ್ಯದ ಸಂದೇಶ

ನಮ್ಮ ದೇಶವು ಸಹಸ್ರಾರು ವರ್ಷಗಳಿಂದಲೇ ಶಾಂತಿ, ಸಾಮರಸ್ಯ, ಸತ್ಯ – ಈ ಮೌಲ್ಯಗಳನ್ನು ಜೀವನದ ಅತ್ಯುನ್ನತ ಆದರ್ಶವೆಂದು ಸಾರುತ್ತ ಬಂದಿದೆ. ಇದಕ್ಕೆ ಅನುಸಾರವಾಗಿ ನಮ್ಮ ಸಂಸ್ಕೃತಿ, ಜನಜೀವನ, ಸಾಮಾಜಿಕ ರೀತಿನೀತಿಗಳು ರೂಪುಗೊಂಡಿವೆ. ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನದಲ್ಲಿ ಈ ಮೌಲ್ಯಗಳನ್ನು ಎತ್ತಿಹಿಡಿದರು. ನಮ್ಮ ದೇಶದಲ್ಲೂ ಹಲವಾರು ಯುದ್ಧಗಳು ನಡೆದಿವೆ, ಅನೇಕ ಆಕ್ರಮಣಗಳಿಗೆ ದೇಶ ತುತ್ತಾಗಿದೆ. ಆದರೆ ಅವುಗಳಿಂದಾಗಿ ನಮ್ಮ ದೇಶದ ಮೌಲ್ಯ, ಆದರ್ಶಗಳು ಬದಲಾಗಲಿಲ್ಲ. ಈ ಆಧುನಿಕ ಯುಗದಲ್ಲೂ ಭಾರತದ ನೀತಿ, ವ್ಯವಹಾರ ಹಾಗೂ ಆದರ್ಶಗಳು ಶಾಂತಿ–ಸಾಮರಸ್ಯ–ಸತ್ಯ ಮುಂತಾದ ಮೌಲ್ಯಗಳನ್ನೇ ಆಧರಿಸಿಕೊಂಡು ನಡೆಯುತ್ತಿವೆ. ವೈಯಕ್ತಿಕ ನೆಲೆಯಲ್ಲೋ , ಬಿಡಿಬಿಡಿಯಾದ ಸನ್ನಿವೇಶಗಳಲ್ಲೋ ವ್ಯತಿರಿಕ್ತವಾದ ಕೆಲವು ಪ್ರವೃತ್ತಿಗಳು ಕಂಡು ಬರಬಹುದು; ಆದರೆ ಒಟ್ಟು ದೇಶದ ಆದರ್ಶವೆಂದಾಗ ಈ ಮೌಲ್ಯಗಳು ಇನ್ನೂ ಅದೇ ರೀತಿ ಮುಂದುವರೆದಿವೆ. ಪ್ರಪಂಚದೆಲ್ಲೆಡೆ ಉದ್ವಿಗ್ನಗೊಂಡ, ಹೊತ್ತಿ ಉರಿಯುತ್ತಿರುವ ಪರಿಸ್ಥಿತಿಯ ನಡುವೆ ಭಾರತ ಯಾವ ರೀತಿಯಲ್ಲಿ ಎಲ್ಲವನ್ನೂ ನೋಡುತ್ತಿದೆ? ಅನಿವಾರ್ಯವಾದಾಗ ಯಾವ ರೀತಿ ತನ್ನ ಪಾತ್ರವನ್ನು ವಹಿಸುತ್ತದೆ? ತಟಸ್ಥವಾಗಿ, ನಿಷ್ಕ್ರಿಯವಾಗಿ ನಿಂತು ನೋಡುವ 'ಸಾಕ್ಷಿಭಾವ' ನಮ್ಮ ದೇಶದ ರೀತಿಯೆ?

– ಪ್ರಪಂಚದ ಆಗುಹೋಗುಗಳ ನಡುವೆ ಯಾವ ದೇಶವೂ ತಟಸ್ಥವಾಗಿರಲು ಸಾಧ್ಯವಿಲ್ಲ; ಅದು ಯೋಗ್ಯವೂ ಅಲ್ಲ. ನಮ್ಮ ದೇಶದ ವಿದೇಶೀ ನೀತಿಯಾಗಿರಲಿ, ವ್ಯಾವಹಾರಿಕ ಸಂಬಂಧಗಳಾಗಿರಲಿ ವಿಶ್ವಶಾಂತಿಯ ಆದರ್ಶವನ್ನು ತನ್ನ ಮೂಲಾಧಾರವಾಗಿರಿಸಿಕೊಂಡಿದೆ; ವಿಶ್ವವೇದಿಕೆಯಲ್ಲಾಗಲಿ, ದೇಶ–ದೇಶಗಳ ನಡುವಿನ ಸಂವಾದದಲ್ಲಾಗಲಿ ಭಾರತ ಈ ಆಶಯವನ್ನು ಪದೇ ಪದೇ ವ್ಯಕ್ತಪಡಿಸುತ್ತಾ ಬಂದಿದೆ. ಆದರೆ ಭಯೋತ್ಪಾದನೆ, ಮತೀಯ ಕಲಹ, ಆಂತರಿಕ ಸುರಕ್ಷತೆ – ಮುಂತಾದ ಪ್ರಶ್ನೆಗಳು ಎದುರಾದಾಗಲೆಲ್ಲ ನಮ್ಮ ದೇಶವು ಕಠಿಣವಾದ ನಿರ್ಧಾರಗಳನ್ನು ತೆಗೆದುಕೊಂಡದ್ದಿದೆ. ಜಾಗತಿಕ ನೆಲೆಯಲ್ಲಿ ನೋಡುವಾಗ ಭಾರತದ ರೀತಿಯಲ್ಲಿ ಸ್ಪಷ್ಟವಾಗಿ ಗೋಚರವಾಗುವ ಒಂದು ವಿಶಿಷ್ಟ ಅಂಶವಿದು: ಉನ್ನತ ಹಾಗೂ ಶ್ರೇಷ್ಠ ಮೌಲ್ಯ, ಆದರ್ಶಗಳಿಗೆ ಅನುಗುಣವಾಗಿ ಭಾರತವು ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ; ಆದರೆ ದೇಶದ ಭದ್ರತೆ ಹಾಗೂ ಸಾರ್ವಭೌಮತೆಯ ಪ್ರಶ್ನೆ ಬಂದಾಗ ಅದು ಎಂದೂ ರಾಜಿ ಮಾಡಿಕೊಳ್ಳುವುದಿಲ್ಲ. ಈ ಸಮತೋಲನದ ನೀತಿ ಅತ್ಯಂತ ಆರೋಗ್ಯಕರವಾದ ಒಂದು ನಿಲುವಾಗಿದೆ ಎಂದು ನಾವು ಹೆಮ್ಮೆಪಟ್ಟುಕೊಳ್ಳುವುದರಲ್ಲಿ ತಪ್ಪಿಲ್ಲ.

ಸ್ವಾಮೀಜಿ ಒಂದೆಡೆ ಹೇಳುವಂತೆ, ಒಂದೊಂದು ದೇಶಕ್ಕೂ ಒಂದೊಂದು ವ್ಯಕ್ತಿತ್ವವಿದೆ; ಅದೇ ರೀತಿ ಆಯಾ ದೇಶದ ಮೂಲಭೂತ ಅಂಶ ಬೇರೆ ಬೇರೆಯಾಗಿದೆ. ಇದಕ್ಕೆ ಅನುಗುಣವಾಗಿಯೇ ಈ ದೇಶಗಳು ವರ್ತಿಸುತ್ತವೆ. ಭಾರತದ ಪ್ರಾಣ ಆಧ್ಯಾತ್ಮಿಕತೆಯಲ್ಲಿದೆ. ಆದರೆ, ಎಲ್ಲ ದೇಶಗಳಲ್ಲಿಯೂ ಸಮಾನವಾದ ನೀತಿ ಒಂದಿದೆ – ಎಲ್ಲಿ ಆಯಾ ದೇಶಗಳ ಹಿತ ಇತರ ದೇಶಗಳ ಹಿತವನ್ನು ಅವಲಂಬಿಸಿರುವುದೋ, ಅಲ್ಲಿ ಆ ದೇಶದ ಏಳಿಗೆ ಯುಂಟಾಗುವುದು. ಒಂದು ದೇಶದ ಉನ್ನತಿಯು ಇನ್ನೊಂದು ದೇಶದ ನಾಶವನ್ನು ಅವಲಂಬಿಸಿದೆ ಎಂದು ಯಾವುದಾದರೂ ದೇಶವು ಭಾವಿಸಿದರೆ, ಅದು ವಿನಾಶದತ್ತ ಸಾಗುವುದು ಎನ್ನು

ತ್ತಾರೆ ಸ್ವಾಮೀಜಿ. ಪ್ರಸ್ತುತ ಜಾಗತಿಕ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವಾಗ, ಸ್ವಾಮೀಜಿ ಹೇಳಿರುವ ಈ ಅಂಶಗಳು ಮುಖ್ಯವಾಗುತ್ತವೆ.

### ಪರಿಹಾರವೇನು?

ಅಲ್ಲಮ ಪ್ರಭು ಒಂದು ವಚನದಲ್ಲಿ ಹೇಳುತ್ತಾರೆ:

ಕೃತಯುಗದಲ್ಲಿ ಶ್ರೀಗುರು ಶಿಷ್ಯರಿಗೆ
ಒಡಿದು ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯ !
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ
ಬೈದು ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯ !
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯನಿಗೆ
ಝುಂಕಿಸಿ ಬುದ್ಧಿಯ ಕಲಿಸಿದರೆ,
ಆಗಲಿ, ಮಹಾಪ್ರಸಾದವೆಂದೆನಯ್ಯಾ!
ಕಲಿಯುಗದಲ್ಲಿ ಶ್ರೀಗುರು ಶಿಷ್ಯನಿಗೆ
ವಂದಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯ ! ಗುಹೇಶ್ವರ —
ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು.

ಕಾಲಕಾಲಕ್ಕೆ ತಕ್ಕಂತೆ ಜನಜೀವನ ಬದಲಾಗುತ್ತದೆ; ಮನೋಭಾವ ಬದಲಾಗುತ್ತದೆ. ಪ್ರಾಚೀನ ಕಾಲದ ಯುದ್ಧನೀತಿಗೂ, ಆಧುನಿಕ ಯುದ್ಧನೀತಿಗೂ ಎಷ್ಟೊಂದು ಅಂತರವಿದೆ! ಜಾಗತಿಕ ಬಿಕ್ಕಟ್ಟುಗಳ ಪರಿಹಾರಕ್ಕೆಂದೇ ರೂಪುಗೊಂಡ ವಿಶ್ವಸಂಸ್ಥೆಯು ಈಗ ಭೀಕರ ಯುದ್ಧ ಪರಿಸ್ಥಿತಿ ಎದುರಾದಾಗ ಎಷ್ಟೊಂದು ಅಸಹಾಯಕವಾಗಿ ನಿಂತಿದೆ! 'ದುಡ್ಡೇ ದೊಡ್ಡಪ್ಪ' ಎಂಬ ಮಾತಿನಂತೆ, ಸಿರಿವಂತ ರಾಷ್ಟ್ರಗಳು ಆಡಿದ್ದೇ ನೀತಿ, ಮಾಡಿದ್ದೇ ಧರ್ಮವೆಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಮಧ್ಯಪ್ರಾಚ್ಯದಲ್ಲಾಗುವ ಮಾರಣಹೋಮ, ಯೂರೋಪಿನಲ್ಲಿ ಇಂದು ನಡೆಯುತ್ತಿರುವ ಜನಾಂಗೀಯ ಕಲಹ – ಇವುಗಳ ವಿಷಯದಲ್ಲಿ ವಿಶ್ವಸಂಸ್ಥೆ ಸಕ್ರಿಯವಾಗಿ ಏನನ್ನೂ ಮಾಡುತ್ತಿಲ್ಲವೆಂಬುದು ಅತ್ಯಂತ ದುರದೃಷ್ಟಕರ ಸಂಗತಿಯಾಗಿದೆ. ಎಲ್ಲ ದೇಶಗಳ ಆಗುಹೋಗುಗಳನ್ನು ನಿಯಂತ್ರಿಸಿ, ವಿಶ್ವದ ಶಕ್ತಿಗಳ ನಡುವೆ ಸಮತೋಲನ ಕಾಪಾಡುವುದು ವಿಶ್ವಸಂಸ್ಥೆ ಭದ್ರತಾ ಪಡೆಯ (UNCL) ಕರ್ತವ್ಯವಾಗಿದೆ. ಆದರೆ ಇದರಲ್ಲಿ ಸೇರಿದ ರಾಷ್ಟ್ರಗಳೇ ಯುದ್ಧದಲ್ಲಿ ಸಕ್ರಿಯವಾಗಿ ತೊಡಗಿರುವಾಗ ಅವುಗಳಿಗೆ ಬುದ್ಧಿ ಹೇಳುವವರು ಯಾರು? ಅಲ್ಲಮ ಪ್ರಭು ಹೇಳುವಂತೆ 'ವಂದಿಸಿ ಬುದ್ಧಿಯ ಕಲಿಸುವವ'ರಾದರೂ ಯಾರು? ಒಟ್ಟಿನಲ್ಲಿ ವಿದ್ಯಾಭ್ಯಾಸ ನಡೆಯಬೇಕು. ಆದರೆ ಗುರು ಎಲ್ಲಿದ್ದಾನೋ ತಿಳಿಯದಾಗಿದೆ.

ಅನೇಕ ಬಾರಿ ಮಕ್ಕಳಿಗೆ ಬುದ್ಧಿ ಹೇಳುವಾಗ ಹೇಳುತ್ತೇವೆ: 'ಇನ್ನೊಬ್ಬರ ಮಾತು ಕೇಳಿ ಕಲಿಯಬೇಕು; ಇನ್ನೊಬ್ಬರನ್ನು ನೋಡಿ ಕಲಿಯಬೇಕು; ಅದೇ ರೀತಿ ಇನ್ನು ಕೆಲವನ್ನು ಸ್ವತಃ ಅನುಭವಿಸಿ ಕಲಿಯಬೇಕು.' ಪ್ರಪಂಚ ಸಾಕಷ್ಟು ನೀತಿ ಕೇಳಿದ್ದಾಗಿದೆ, ಅನೇಕ ದುರಂತಗಳನ್ನು ನೋಡಿದ್ದೂ ಆಗಿದೆ. ಜಪಾನಿನಂತಹ ರಾಷ್ಟ್ರಗಳು ಸಾಕಷ್ಟು ಅನುಭವಿಸಿದ್ದೂ ಆಗಿದೆ. ಇಷ್ಟೆಲ್ಲ ಆದ ಬಳಿಕವೂ ಪ್ರಪಂಚದ ದೇಶಗಳು ಬಿಕ್ಕಟ್ಟು, ಯುದ್ಧ, ಹಗೆತನಗಳಲ್ಲಿ ತೊಡಗಿವೆಯೆಂದರೆ, ಇದು ಖಂಡಿತ ಒಳ್ಳೆಯ ಲಕ್ಷಣವಲ್ಲ. ಮಾರಕ ಅಸ್ತ್ರಗಳ, ಅಣ್ವಸ್ತ್ರ ಸಮರಗಳ ಭೀಕರ ಚಿತ್ರಣಗಳು ನಮ್ಮ ಕಣ್ಣ ಮುಂದಿದ್ದೂ ಮತ್ತೆ ಮತ್ತೆ ದೇಶ, ಜನಾಂಗ, ಸಮಾಜಗಳು ಪರಸ್ಪರ ಕಲಹಗಳಲ್ಲಿ ತೊಡಗಿರುವುದು ಕಾಲದ ವಿಡಂಬನೆಯಲ್ಲದೆ ಮತ್ತೇನೂ ಅಲ್ಲ.

### ಮಹಾಪುರುಷರು ಹಾಗೂ ವೈಯಕ್ತಿಕ ಮೌಲ್ಯಗಳು

ಹಲವು ವ್ಯಕ್ತಿಗಳು ಸೇರಿ ಒಂದು ಸಮಾಜ, ರಾಷ್ಟ್ರ; ಹಲವು ಜನಾಂಗ, ರಾಷ್ಟ್ರಗಳು ಸೇರಿ ಪ್ರಪಂಚ – ಇದು ಮಾನವ ಜನಾಂಗದ ರಚನೆ. ಆದರೆ ಒಬ್ಬೊಬ್ಬ ವ್ಯಕ್ತಿ ವೈಯಕ್ತಿಕವಾಗಿ ಕಂಡುಕೊಳ್ಳುವ, ಅನುಭವಿಸುವ ಹಾಗೂ ಜಗತ್ತಿನ ಮುಂದಿಡುವ ಸತ್ಯಗಳು ವಿಭಿನ್ನವಾಗಿರುತ್ತವೆ. ಕೆಲವರ ಕಾಣ್ಕೆಗಳು ಅತ್ಯಂತ ವಿಶಿಷ್ಟವೂ ಪ್ರಭಾವಶಾಲಿಯೂ ಆಗಿರುತ್ತವೆ. ಅಂಥವರು ವಿಶ್ವನಾಯಕರಾಗಿರುತ್ತಾರೆ; ಜಗತ್ತನ್ನೇ ಬದಲಾಯಿಸಬಲ್ಲವರಾಗಿರುತ್ತಾರೆ. ಶ್ರೀರಾಮ, ಶ್ರೀಕೃಷ್ಣ, ಬುದ್ಧ, ವಿವೇಕಾನಂದರಂಥವರು ಜಗತ್ತಿಗೆ ಬೆಳಕು ನೀಡಿದ್ದಾರೆ. ವಿರುದ್ಧ ದಿಕ್ಕಿನಲ್ಲಿ , ಜಗತ್ತಿಗೆ ಮಹಾದುರಂತಗಳನ್ನು ತಂದಿತ್ತ ಹಿಟ್ಲರ್, ಚೆಂಗಿಸ್‌ಖಾನ್‌ರಂಥವರೂ ಇದ್ದಾರೆ; ಆದರೆ ಅವರ ಮಾದರಿಯನ್ನು ಪ್ರಪಂಚ ಗೌರವಿಸುವುದಲ್ಲ, ಅನುಸರಿಸುವುದೂ ಇಲ್ಲ. ವೈಯಕ್ತಿಕವಾಗಿ ಪ್ರಭಾವಶಾಲಿಯಾಗಿದ್ದರೆ ಸಾಲದು, ಜಗತ್ತಿಗೆ ಶಾಂತಿ, ಸತ್ಯ, ಸಮಾಧಾನಗಳನ್ನು ನೀಡುವವರು ಮಾತ್ರವೇ ದೂರಗಾಮಿಯಾದ ಪರಿಣಾಮವನ್ನು ಜಗತ್ತಿನಲ್ಲಿ ಉಂಟುಮಾಡಬಲ್ಲರು ಎಂಬುದನ್ನು ಇದು ತೋರಿಸುತ್ತದೆ. ಜಗತ್ತಿನಲ್ಲಿ ಇಂದು ಉಂಟಾಗಿರುವ ಬಿಕ್ಕಟ್ಟಿನ ಸನ್ನಿವೇಶದಲ್ಲಿ, ಅಂಥ ಮಹಾವ್ಯಕ್ತಿಗಳ ಅಸಾಧಾರಣ ಧ್ಯೇಯ, ಆದರ್ಶಗಳು ನಮ್ಮ ನಾಯಕರ ಕಣ್ಣ ಮುಂದಿರಬೇಕು. ನಾಯಕರು ತೆಗೆದುಕೊಳ್ಳುವ ಒಂದೊಂದು ನಿರ್ಣಯವೂ ಮಹತ್ತರ ಪರಿಣಾಮವನ್ನು ಬೀರುತ್ತವೆ; ದೇಶಗಳ ಭವಿಷ್ಯವನ್ನೇ ನಿರ್ಣಯಿಸುತ್ತವೆ. ಆದ್ದರಿಂದ ಅಂಥ ನಾಯಕರಿಗೆ ಜಗತ್ತಿನ ಮಹಾಪುರುಷರ ಪ್ರೇರಣೆ ಲಭಿಸಲಿ, ಇದರಿಂದ ವಿಶ್ವಶಾಂತಿ ನೆಲೆಸಲಿ ಎಂದು ಪ್ರಾರ್ಥಿಸೋಣ.

### ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಭಾನುವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| ೭ | ಶನಿವಾರ | ಶ್ರೀಗಣೇಶ ಚತುರ್ಥಿ |
| ೧೪ | ಶನಿವಾರ | ಏಕಾದಶಿ |
| ೨೬ | ಗುರುವಾರ | ಸ್ವಾಮಿ ಅಭೇದಾನಂದ ಜಯಂತಿ |
| ೨೮ | ಶನಿವಾರ | ಏಕಾದಶಿ |